# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** **ದಿನಾಂಕ: 02.02.2020**

## ಪೂಜ್ಯ ಮಹಾಪೌರರು ರವರಿಂದ ಕ್ರೀಡಾ ಸಮುಚ್ಚಯ ಹಾಗೂ ಅಂತರಾಷ್ಟ್ರೀಯ ಈಜುಕೊಳ ಲೋಕಾರ್ಪಣೆ:



ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ವಿದ್ಯಾರಣ್ಯಪುರ ವಾರ್ಡ್-09 ಬಿ.ಇ.ಎಲ್ ಬಡಾವಣೆಯಲ್ಲಿ ಬೃಹತ್ ಕ್ರೀಡಾಂಗಣ ಸಮುಚ್ಚಯ ಹಾಗೂ ಅಂತರಾಷ್ಟ್ರೀಯ ಈಜುಕೊಳವನ್ನು ಪೂಜ್ಯ ಮಹಾಪೌರರು ಮತ್ತು ಸ್ಥಳೀಯ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಕೃಷ್ಣ ಬೈರೇಗೌಡ ರವರು ಲೋಕಾರ್ಪಣೆ ಗೊಳಿಸಿದರು. ಈ ವೇಳೆ ಆಡಳಿತ ಪಕ್ಷದ ನಾಯಕರು ಶ್ರೀ ಮುನೀಂದ್ರ ಕುಮಾರ್, ಸ್ಥಳೀಯ ಪಾಲಿಕೆ ಸದಸ್ಯರುಗಳಾದ ಶ್ರೀಮತಿ ಹೆಚ್.ಕುಸುಮ, ಶ್ರೀ ಪಾರ್ಥಿಭರಾಜನ್, ವಲಯ ವಿಶೇಷ ಆಯುಕ್ತರು ಡಾ. ರವಿಕುಮಾರ್ ಸುರಪುರ, ವಲಯ ಜಂಟಿ ಆಯುಕ್ತರು ಶ್ರೀ ಅಶೋಕ್ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

**ಮೊದಲಿಗೆ ಪ್ರಾಸ್ತಾವಿಕ ವಾಗಿ ಮಾನ್ಯ ಶಾಸಕರು ಕೃಷ್ಣಬೈರೇಗೌಡ ರವರು ಮಾತನಾಡಿ,** ಈ ಕ್ರೀಡಾ ಸಮುಚ್ಚಯವನ್ನು ಕಳೆದ 7 ವರ್ಷಗಳ ಸತತ ಪ್ರಯತ್ನದಿಂದಾಗಿ ಸುಮಾರು 16 ಕೋಟಿ ರೂ. ವ್ಯಯಿಸಿ ವಿವಿಧ ಕ್ರೀಡೆಗಳಿಗೆ ಅನುಗುಣವಾಗಿ ಸುಮಾರು 18 ಎಕರೆ ವಿಶಾಲವಾದ ಪ್ರದೇಶದಲ್ಲಿ ಸುಸಜ್ಜಿತವಾಗಿ ಕ್ರೀಡಾಂಗಣ ನಿರ್ಮಿಸಿ ಒಂದೇ ಸೂರಿನಡಿ ಎಲ್ಲಾ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಅಂತರಾಷ್ಟ್ರೀಯ ಈಜುಕೊಳ, ಬ್ಯಾಸ್ಕೆಟ್ ಬಾಲ್, ಟೆನ್ನಿಸ್ ಕೋರ್ಟ್, ಸ್ಕೇಟಿಂಗ್ ರಿಂಗ್, ಪುಟ್‌ಬಾಲ್, ಹ್ಯಾಂಡ್‌ಬಾಲ್ ಮೈದಾನ ನಿರ್ಮಿಸಲಾಗಿದ್ದು, ಈಗಾಗಲೇ 7-8 ಸಾವಿರ ಚದರ ಅಡಿ ಒಳಾಂಗಣ ಕ್ರೀಡಾಂಗಣದಲ್ಲಿ ಜಿಮ್, ಯೋಗಾ, ಹೇರೋಬಿಕ್ಸ್, ಟೇಬಲ್ ಟೆನಿಸ್, ಮಕ್ಕಳ ಕ್ರೀಡಾ ಸಾಮಾಗ್ರಿಗಳು, ಚಿಕ್ಕ ಮಕ್ಕಳಿಂದ ಇಡಿದು ವಯೋವೃದ್ಧ ವಯಸ್ಸಿನವರೆಗೂ ಅನುಕೂಲವಾಗುವಂತೆ ಕ್ರೀಡಾ ಸಂಕೀರ್ಣವನ್ನು ಅಭಿವೃದ್ಧಿ ಪಡಿಸಲಾಗಿದೆ. ಇದರ ಸದುಪಯೋಗವನ್ನು ಎಲ್ಲರೂ ಉಪಯೋಗಿಸಿಕೊಳ್ಳಬೇಕಾಗಿ ಕೋರುತ್ತೇನೆ ಎಂದು ಹೇಳಿದರು.

ಕ್ರೀಡಾ ಸಮುಚ್ಚಯ ಲೋಕಾರ್ಪಣೆ ಸಲುವಾಗಿ ಇಂದು ಕ್ರೀಡಾ ಉತ್ಸವ ಆಚರಿಸಲಾಗುತ್ತಿದ್ದು, ಇದರಲ್ಲಿ ಸುಮಾರು 1500 ಮಕ್ಕಳು ಭಾಗವಹಿಸುತ್ತಿದ್ದಾರೆ. ಸದರಿ ಉತ್ಸವದಲ್ಲಿ ಭಾಗವಹಿಸಿ ವಿಜೇತರಾದ ಮಕ್ಕಳಿಗೆ ಪ್ರೋತ್ಸಾಹ ಮೊತ್ತ(ಬಹುಮಾನ)ವಾಗಿ 12 ಲಕ್ಷ ರೂ. ಇಡಲಾಗಿದ್ದು, ವಿಜೇತರಿಗೆ ಪ್ರೋತ್ಸಾಹ ಮೊತ್ತವನ್ನು ಪಡೆದುಕೊಳ್ಳಲಿದ್ದಾರೆ. ಸದರಿ ಕ್ರೀಡಾಂಗಣದ ಗುಣಮಟ್ಟ ಕಾಪಾಡುವ ಸಲುವಾಗಿ ವಾರ್ಷಿಕ ನಿರ್ವಹಣೆಯನ್ನು ನೀಡಲಾಗಿದೆ, ಇದರಿಂದಾಗಿ ಸಾರ್ವಜನಿಕರು ಹೆಚ್ಚು ಉಪಯೋಗಿಸಿಕೊಂಡು ಅಂತರಾಷ್ಟ್ರೀಯ ಪ್ರತಿಭೆಗಳು ಹೊರಬರಲಿ ಎಂದು ತಿಳಿಸಿದರು.

**ತದನಂತರ, ಸ್ಥಳೀಯ ನಗರ ಸಭಾ ಸದಸ್ಯರು ಶ್ರೀಮತಿ ಹೆಚ್.ಕುಸುಮ ರವರು ಮಾತನಾಡಿ,** ಸ್ಥಳೀಯ ಶಾಸಕರ ಕಾಳಜಿ ಮತ್ತು ಶ್ರಮದಿಂದಾಗಿ ಉತ್ತಮ ಗುಣಮಟ್ಟದ ಕ್ರೀಡಾಂಗಣವನ್ನು ವಿದ್ಯಾರಣ್ಯಪುರ ವಾರ್ಡ್‌ನಲ್ಲಿ ಅಭಿವೃದ್ಧಿಗೊಂಡಿರುವುದು ಸಂತೋಷವಾಗಿದೆ. ಎಲ್ಲರೂ ಕ್ರೀಡೆಗೆ ನಗರದ ಮಧ್ಯದಲ್ಲಿರುವ ಕ್ರೀಡಾಂಗಣವನ್ನೆ ಆಶ್ರಯಿಸಿದ್ದಾರೆ. ಇದೀಗ ವಿದ್ಯಾರಣ್ಯಪುರ ವಾರ್ಡ್‌ನಲ್ಲಿ ಅಂತರಾಷ್ಟ್ರೀಯ ಮಟ್ಟದ ಕ್ರೀಡಾ ಸಮುಚ್ಚಯ ನಿರ್ಮಾಣವಾಗಿರುವುದು ಸುತ್ತಮುತ್ತಲಿನ ಎಲ್ಲಾ ನಾಗರೀಕರಿಗೆ ಹೆಚ್ಚು ಪ್ರಯೋಜನಕಾರಿಯಾಗಲಿದೆ. ಇದರ ಸೌಲಭ್ಯಗಳನ್ನು ಎಲ್ಲರೂ ಪಡೆದುಕೊಳ್ಳುವಂತೆ ಕೋರಿದರು.

**ಪೂಜ್ಯ ಮಹಾಪೌರರು ಮಾತನಾಡಿ,** ಅಂತರಾಷ್ಟ್ರೀಯ ಗುಣಮಟ್ಟದ ಕ್ರೀಡಾಂಗಣ ಲೋಕಾರ್ಪಣೆ ಮಾಡುತ್ತಿರುವುದು ತುಂಬಾ ಸಂತೋಷದಾಯಕವಾಗಿದೆ. ಒಂದೇ ಸೂರಿನಡಿ ಎಲ್ಲಾ ಕ್ರೀಡೆಗಳಿಗೆ ಅವಕಾಶವಿರುವಿದು ಬಹಳ ವಿರಳ, ಈ ಸಾಧನೆ ಮಾಡಿರುವ ಮಾನ್ಯ ಶಾಸಕರು, ಲೋಕಸಭಾ ಸದಸ್ಯರು ಹಾಗೂ ಸ್ಥಳೀಯ ನಗರಸಭಾ ಸದಸ್ಯರು ಒಟ್ಟಾಗಿ ಇಂತಹ ಅಭಿವೃದ್ಧಿ ಕಾರ್ಯಕೈಗೊಂಡಿರುವುದು ಬಹಳ ಸಂತೋಷದಾಯಕ ಎಂದರು.

ಈ ಭಾಗದ ನಾಗರೀಕರು ಎಲ್ಲಾ ವಯೋಮಾನದವರು ಒಂದೇ ಸೂರಿನಡಿ ನಿರ್ಮಿಸಿರುವ ಕ್ರೀಡಾ ಸಮುಚ್ಚಯದ ಸೌಲಭ್ಯ ಪಡೆಯಬಹುದಾಗಿದೆ. ಈ ಕಾರ್ಯ ಮಾಡಿದ ಎಲ್ಲರಿಗೂ ಅಭಿನಂದಿಸುತ್ತಾ, ನಿರ್ವಹಣೆ ಕಾರ್ಯವನ್ನು ಯಾವುದೇ ಲೋಪಗಳಿಗೆ ಅವಕಾಶ ನೀಡದಂತೆ ನಿರ್ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದರು.

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**